


# ಸಬಲ

## ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೊಳಿಸಲು ರಚಿಸಲಾಗಿರುವ ಜಾಗೃತ ಸಮಿತಿ ಸದಸ್ಯರಿಗಾಗಿ

## ಮಾಹಿತಿ ಕೈಪಿಡಿ

**CENTRE FOR CHILD AND THE LAW (CCL)**
National Law School of India University (NLSIU)

धर्मो रक्षति रक्षितः

**ಮಗು ಮತ್ತು ಕಾನೂನು ಕೇಂದ್ರ**
**ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ**

ನಾಗರಭಾವಿ, ಬೆಂಗಳೂರು - 560 072, ಭಾರತ
ದೂರವಾಣಿ: +91-080-2301 0000
ಈಮೇಲ್: ccl@nls.ac.in
ವೆಬ್‌ಸೈಟ್: https://ccl.nls.ac.in

# ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೊಳಿಸಲು ರಚಿಸಲಾಗಿರುವ ಜಾಗೃತ ಸಮಿತಿ ಸದಸ್ಯರಿಗಾಗಿ

# ಮಾಹಿತಿ ಕೈಪಿಡಿ

ಪ್ರಕಟಣೆ

ಮಗು ಮತ್ತು ಕಾನೂನು ಕೇಂದ್ರ

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ

ನಾಗರಬಾವಿ ಬೆಂಗಳೂರು-560 072.

ಮಗು ಮತ್ತು ಕಾನೂನು ಕೇಂದ್ರವು, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ವಿಶಿಷ್ಟ ಬಹುಶಿಸ್ತೀಯ ಸಂಶೋಧನಾ ಕೇಂದ್ರವಾಗಿದೆ. ಶಿಕ್ಷಣದ ಹಕ್ಕು, ಆಹಾರದ ಹಕ್ಕು, ಹಾಗು ಮಕ್ಕಳ ರಕ್ಷಣೆಗೆ ಕುರಿತಂತೆ ಕೇಂದ್ರವು ಕಾನೂನು, ನೀತಿ-ನಿರೂಪಣೆ ಮತ್ತು ಸಾಮಾಜಿಕ ಬದಲಾವಣೆಯ ವಿಷಯದಲ್ಲಿ ಹಲವಾರು ವರ್ಷಗಳಿಂದ ಸಂಶೋಧನೆ, ಭಾಗವಹಿಸುವಾತ್ಮಕ ಸಂಶೋಧನೆ ಮತ್ತು ಕ್ಷೇತ್ರವಿಸ್ತರಣಾ ಕಾರ್ಯಚಟುವಟಿಕೆಯನ್ನು ನಿರ್ವಹಿಸುತ್ತಿದೆ.

ಈ ಪ್ರಕಟಣೆಗೆ ಜಾಗೃತ ಸಮಿತಿಯ ಸರ್ಕಾರಿ ಅದೇಶಗಳು ಹಾಗೂ ವಿವಿಧ ಇಲಾಖೆಗಳು ಅಹಾರದ ವಿಷಯವಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳು ಹಾಗು ಸರ್ಕಾರ ಹೊರಡಿಸಿದ ಪ್ರಕಟಣೆಗಳಿಂದ ಕಲಿ ಹಾಕಲಾಗಿದೆ.


**ವರ್ಷ : 2021**

**ಮಗು ಮತ್ತು ಕಾನೂನು ಕೇಂದ್ರ, 2021**

**ಸಂಪಾದಕರು : ಡಾ॥ ನೀತು ಶರ್ಮ ಮತ್ತು ಕುಮಾರಸ್ವಾಮಿ. ಟಿ.**

**ಸಹಕಾರ : ಶೃತಿ ರಾಮನ್**

**ವಿನ್ಯಾಸ : ಜನ್ಯ ಕ್ರಿಯೇಷನ್ಸ್**

**ಪ್ರಕಾಶಕರು:**

**ಮಗು ಮತ್ತು ಕಾನೂನು ಕೇಂದ್ರ**
**ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ**
**ನಾಗರಭಾವಿ, ಬೆಂಗಳೂರು – 560 072, ಭಾರತ**

**ದೂರವಾಣಿ: +91–080–2301 0000**

**ಈಮೇಲ್: ccl@nls.ac.in**

**ವೆಬ್‌ಸೈಟ್: https://ccl.nls.ac.in**

ಪ್ರಪಂಚದಲ್ಲಿಯೇ ಅತ್ಯಧಿಕ ಆಹಾರ, ಅದರಲ್ಲೂ ಪೌಷ್ಟಿಕಾಂಶಯುತ ಆಹಾರದ ಕೊರತೆಯನ್ನು ಎದುರಿಸುತ್ತಿರುವ ರಾಷ್ಟ್ರಗಳಲ್ಲಿ ಭಾರತವು ಮೊದಲ ಸ್ಥಾನ ಪಡೆದಿರುವ ದೇಶವೆಂದು ಅನೇಖ ಸಂಶೋಧನೆ ಮತ್ತು ಅಧ್ಯಯನಗಳು ಹೇಳುತ್ತದೆ. ಇಂತಹ ಸಂದರ್ಭದಲ್ಲಿ ಅನೇಕರ ಒತ್ತಾಸೆ ಮತ್ತು ಚಳುವಳಿಗಳು, ಹೋರಾಟಗಳ ಭಾಗವಾಗಿ ಬಂದಿರುವ ಕಾಯ್ದೆಯೇ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013. ಈ ಕಾಯ್ದೆಯು 2013 ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಅಂಗೀಕಾರಗೊಂಡು, ಭಾರತದ ರಾಷ್ಟ್ರಪತಿಯವರ ಅಂಕಿತ ಪಡೆದು, ಭಾರತದ ರಾಜ್ಯ ಪತ್ರದಲ್ಲಿ ಪ್ರಕಟಿಸಲ್ಪಡಲಾಯಿತು ಹಾಗೂ 2013ರ 20ನೇ ಕಾಯ್ದೆಯಾಗಿ 10ನೇ ಸೆಪ್ಟೆಂಬರ್ 2013 ರಂದು ಜಾರಿಗೆ ಬಂದಿತು.

## ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 ಎಂದರೇನು?

ಆಹಾರ ಭದ್ರತಾ ಕಾಯ್ದೆ ಎಂದರೆ ಭಾರತದ ಸಂವಿಧಾನದ ಪ್ರಕಾರ ನೀಡಿರುವ ಮೂಲಭೂತ ಹಕ್ಕಿನ ಭಾಗವಾಗಿ ಪ್ರತಿಯೊಬ್ಬರಿಗೂ ಎಲ್ಲ ಸಮಯದಲ್ಲಿಯೂ ಗೌರವಯುತವಾಗಿ ಸಾಕಾಗುವಷ್ಟು ಉತ್ತಮ ಗುಣಮಟ್ಟದ ಪೌಷ್ಟಿಕ ಆಹಾರ ಸಿಗುವಂತೆ ಮಾಡುವುದೇ ಆಹಾರ ಭದ್ರತೆ. ಈ ಆಹಾರ ಭದ್ರತೆಗಾಗಿ ಕಾನೂನುಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸುವುದೇ ಕಾಯ್ದೆ/ಕಾನೂನು. ಇದನ್ನೇ ಆಹಾರ ಭದ್ರತಾ ಕಾಯ್ದೆ ಎಂದು ಕರೆಯಲಾಗುತ್ತದೆ.

## ಆಹಾರ ಭದ್ರತಾ ಕಾಯ್ದೆಯ ಮೂಲ ಉದ್ದೇಶವೇನು?

ಆಹಾರ ಭದ್ರತಾ ಕಾಯ್ದೆಯ ಮೂಲ ಉದ್ದೇಶವು ನಮ್ಮ ಭಾರತ ಸಂವಿಧಾನದ ಪ್ರಮುಖವಾದ ಆಶಯವಾದ ಆಹಾರದ ಹಕ್ಕನ್ನು ನೀಡುವುದು. ಇದು ಮಾನವ ಹಕ್ಕುಕೂಡ ಹೌದು. ಈ ಹಕ್ಕು ಎಲ್ಲರಿಗೂ ಸಿಗಬೇಕಾದದ್ದು ಸಂವಿಧಾನದ ಮೂಲಮಂತ್ರ. ದೇಶದ ಪ್ರತಿಯೊಬ್ಬರು ಹಸಿವಿಲ್ಲದೇ ಉತ್ತಮವಾದ ಗುಣಮಟ್ಟದ ಪೌಷ್ಟಿಕಯುತವಾದ ಆಹಾರವು ಸಿಗುವಂತೆ ಮಾಡುವುದು ಹಾಗೂ ಮಾನವನನ್ನು ಗೌರವಯುತವಾಗಿ ಬಾಳುವಂತೆ ಮಾಡಲು ಈ ಹಕ್ಕು ಸಹಕರಿಸುತ್ತದೆ. ಈ ಆಹಾರದ ಹಕ್ಕನ್ನು ನೀಡಲು ಯಾವುದೇ ದಯಾ, ಕರುಣೆ ಮನೋಭಾವನೆಯನ್ನು ಹೊಂದದೆ ಎಲ್ಲರಿಗೂ ಅವರ ಜನ್ಮಸಿದ್ಧ ಹಕ್ಕು ಎಂದು ಪರಿಗಣಿಸಿ ನಮ್ಮ ಸಂವಿದಾನದ ಆಶಯಗಳನ್ನು ಈಡೇರಿಸಲು ಈ ಕಾಯ್ದೆ ಮಹತ್ತರವಾದ ಜವಾಬ್ದಾರಿಯನ್ನು ಹೊಂದಿದೆ.

## ಆಹಾರ ಭದ್ರತಾ ಕಾಯ್ದೆ ಯಾವ ಯಾವ ವರ್ಗವನ್ನು ಹೆಚ್ಚು ಕೇಂದ್ರೀಕರಿಸುತ್ತದೆ?

ಆಹಾರ ಭದ್ರತಾ ಕಾಯ್ದೆ ದೇಶದ ಪ್ರತಿಯೊಬ್ಬ ಮಾನವನನ್ನು ಕೇಂದ್ರೀಕರಿಸಿ ಹಕ್ಕನ್ನು ನೀಡುತ್ತದೆ. ತಾಯಿಯ ಗರ್ಭದಲ್ಲಿರುವಾಗಿನಿಂದ ಸಾಯುವವರೆಗೆ ಈ ಹಕ್ಕು ಸಿಗುವಂತೆ ಮಾಡುತ್ತದೆ. ಅದರಲ್ಲೂ ಪ್ರಮುಖವಾಗಿ ದುರ್ಬಲ ವರ್ಗದವರು, ಮಕ್ಕಳು, ವಿಶೇಷ ಚೇತನರು, ಮಹಿಳೆಯರು, ವೃದ್ಧರು, ಸಾಮಾಜಿಕ ತಾರತಮ್ಯಕ್ಕೆ ಒಳಗಾದವರು, ಅಸಹಾಯಕರು, ಇಂತಹ ವರ್ಗಗಳಿಗೆ ಯೋಜನೆಗಳು, ಅಭಿವೃದ್ಧಿ ಯೋಜನೆಗಳು, ನಿಯಮ/ಕಾನೂನುಗಳನ್ನು ರಚಿಸಿ ಅವರಿಗೆ ಆಹಾರ ಭದ್ರತಾ ಹಕ್ಕು ಸಿಗುವ ರೀತಿಯಲ್ಲಿ ಈ ಕಾಯ್ದೆಯ ಮೂಲ ಉದ್ದೇಶವಾಗಿದೆ.

## ಆಹಾರ ಭದ್ರತಾ ಕಾಯ್ದೆಯನ್ನು ಸರಿಯಾದ ಕ್ರಮದಲ್ಲಿ ಜಾರಿಗೊಳಿಸದೇ ಇದ್ದರೆ ಯಾವ ಯಾವ ಪರಿಣಾಮಗಳು ನಮಗೆ ಎದುರಾಗುತ್ತವೆ?

ಮಕ್ಕಳಲ್ಲಿ ಅಪೌಷ್ಟಿಕತೆ, ವಿಕಲಾಂಗತೆ ಹೆಚ್ಚುತ್ತದೆ. ದೇಶದ ಅಭಿವೃದ್ಧಿಗೆ ಮಾನವ ಸಂಪನ್ಮೂಲದ ಕೊರತೆ ಎದುರಾಗುತ್ತದೆ ಹಾಗು ಸಂವಿಧಾನದ ಆಶಯಗಳನ್ನು ಈಡೇರಿಸಲು ಸಾಧ್ಯವಾಗದೇ ಇರುವುದು, ಮುಂತಾದ ದೇಶದ ಅಭಿವೃದ್ಧಿಗೆ ತೊಡಕಾದ ಆನೇಕ ಸಮಸ್ಯೆಗಳು ಹೆಚ್ಚಾಗುತ್ತದೆ.

## ಆಹಾರ ಭದ್ರತಾ ಕಾಯ್ದೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು ಯಾವ ಅವಕಾಶಗಳಿವೆ?

ಆಹಾರ ಭದ್ರತಾ ಕಾಯ್ದೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು ವಿವಿಧ ಹಂತದಲ್ಲಿ ಸಮುದಾಯದ ಸಹಭಾಗಿತ್ವದೊಂದಿಗೆ, ಪ್ರಜಾ ಪ್ರತಿನಿಧಿಗಳು, ಸರ್ಕಾರದ ಅಧಿಕಾರಿಗಳನ್ನೊಳಗೊಂಡ ಜಾಗೃತ ಸಮಿತಿಗಳನ್ನು ರಚಿಸಿ ಅವುಗಳಿಗೆ ಅಧಿಕಾರ ಮತ್ತು ಜಾವಾಬ್ದಾರಿಯನ್ನು ನೀಡುವುದು ಮತ್ತು ಅವರಿಗೆ ಸೂಕ್ತವಾದ ತರಬೇತಿಗಳನ್ನು ನೀಡಿ ಕಾಯ್ದೆಯಲ್ಲಿರುವ ಅಂಶಗಳನ್ನು ಯಶಸ್ವಿಯಾಗಿ ಅನುಷ್ಟಾನಗೊಳ್ಳುವಂತೆ ಮಾಡುವುದು.

## ಆಹಾರ ಭದ್ರತಾ ಕಾಯ್ದೆ 2013 ರಲ್ಲಿ ಯಾವ ಯಾವ ಹಂತದಲ್ಲಿ ಜಾಗೃತ ಸಮಿತಿಗಳಿವೆ?

- ರಾಜ್ಯ ಮಟ್ಟದ ಸಮಿತಿ
- ಜಿಲ್ಲಾ ಮಟ್ಟದ ಸಮಿತಿ
- ತಾಲ್ಲೂಕು ಮಟ್ಟದ ಸಮಿತಿ
- ನ್ಯಾಯ ಬೆಲೆ ಅಂಗಡಿ ಮಟ್ಟದ ಸಮಿತಿ

## ಈ ಕಾಯ್ದೆಯ ಅಡಿಯಲ್ಲಿ ಬರುವ ಪ್ರಮುಖ ಯೋಜನೆಗಳುಯಾವುವು?

### ಸಾರ್ವಜನಿಕ ವಿತರಣಾ ವ್ಯವಸ್ಥೆ (ಟಿ.ಪಿ.ಡಿ.ಎಸ್)

ಸಾರ್ವಜನಿಕ ವಿತರಣಾ ವ್ಯವಸ್ಥೆ (ಟಿ.ಪಿ.ಡಿ.ಎಸ್) ನ್ಯಾಯ ಬೆಲೆ ಅಂಗಡಿಗಳ (ಎಫ್.ಪಿ.ಎಸ್) ಮೂಲಕ ಸಬ್ಸಿಡಿ ದರದಲ್ಲಿ (ಕೆಲವೊಂದು ರಾಜ್ಯ ಉಚಿತ) ಆಹಾರ ಧಾನ್ಯಗಳು ಮತ್ತು ಸಾಮಗ್ರಿಗಳನ್ನು ವಿತರಿಸುತ್ತದೆ.

ಅಂತ್ಯೋದಯ ಅನ್ನ ಯೋಜನೆ (ಎ.ಎ.ವೈ) ರೇಷನ್ ಕಾರ್ಡಿನ ಮುಖಾಂತರ ನಿರ್ಗತಿಕ ಮನೆಗಳಿಗೆ ವಿಶೇಷ ಆಹಾರ ಪದಾರ್ಥಗಳನ್ನು ಒದಗಿಸುತ್ತದೆ. ಕಾರ್ಡುದಾರರು ಗೋಧಿಗೆ ಪ್ರತಿ ಕೆಜಿಗೆ 2 ರೂ ನಂತೆ ಮತ್ತು ಅಕ್ಕಿಗೆ ಪ್ರತಿ ಕೆಜಿಗೆ 3 ರೂನಂತೆ ತಿಂಗಳಿಗೆ 35 ಕೆಜಿ ಧಾನ್ಯಕ್ಕೆ ಅರ್ಹರು (ವಿವಿಧ ರಾಜ್ಯದಲ್ಲಿ ಆಯಾ ರಾಜ್ಯ ಸರ್ಕಾರಗಳು ತೀರ್ಮಾನಿಸಿದಂತೆ ಆಹಾರ ಸಾಮಾಗ್ರಿ ಮತ್ತು ಹಣ ವಿತರಣೆಗೊಳ್ಳುತ್ತದೆ).ಈ ಅಂಶವನ್ನು ಆಹಾರ ಭದ್ರತಾ ಕಾಯ್ದೆ 2013 ರಲ್ಲಿ ಸೂಚಿಸಲಾಗಿದೆ

## ರಾಷ್ಟ್ರೀಯ ವಯಸ್ಸಾದವರ ಪಿಂಚಣಿ ಯೋಜನೆ (ಎನ್.ಓ.ಎ.ಪಿ.ಎಸ್)

ರಾಷ್ಟ್ರೀಯ ವಯಸ್ಸಾದವರ ಪಿಂಚಣಿ ಯೋಜನೆ (ಎನ್.ಓ.ಎ.ಪಿ.ಎಸ್) ಖಚಿತ ವರಮಾನವಿಲ್ಲದ ಹಿರಿಯ ನಾಗರಿಕರಿಗೆ ಪಿಂಚಣಿಯನ್ನು ಒದಗಿಸುತ್ತದೆ. ರಾಜ್ಯದಿಂದ ರಾಜ್ಯಕ್ಕೆ ಅರ್ಹತೆ ಮತ್ತು ವ್ಯಾಪ್ತಿಯು ಬದಲಾಗುತ್ತದೆ.

## ರಾಷ್ಟ್ರೀಯ ಕುಟುಂಬ ಹಿತ ಯೋಜನೆ (ಎನ್.ಎಫ್.ಬಿ.ಎಸ್)

ರಾಷ್ಟ್ರೀಯ ಕುಟುಂಬ ಹಿತ ಯೋಜನೆ (ಎನ್.ಎಫ್.ಬಿ.ಎಸ್) ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರಧಾನ ಪೋಷಕರು ಮೃತಪಟ್ಟರೆ, ಆ ಕುಟುಂಬಕ್ಕೆ 10,000 ರೂಪಾಯಿಗಳ ನೆರವನ್ನು ನಿಶ್ಚಯಗೊಳಿಸುತ್ತದೆ.

## ರಾಷ್ಟ್ರೀಯ ಪ್ರಸೂತಿ ಹಿತ ಯೋಜನೆ (ಎನ್.ಎಮ್.ಬಿ.ಎಸ್)

ರಾಷ್ಟ್ರೀಯ ಪ್ರಸೂತಿ ಹಿತ ಯೋಜನೆ (ಎನ್.ಎಮ್.ಬಿ.ಎಸ್) ಬಡತನದ ರೇಖೆಗಿಂತ ಕೆಳಗಿರುವ ಗರ್ಭಿಣಿ ಮಹಿಳೆಯರಿಗೆ ಪ್ರಸೂತಿಯ ಪ್ರಯೋಜನೆಗಳನ್ನು ಭದ್ರಪಡಿಸುತ್ತದೆ. ಯೋಜನೆಯು ಅವರಿಗೆ 500 ರೂಪಾಯಿಯ ನಗದನ್ನು ನೀಡುತ್ತದೆ.

## ಮಗುವಿನ ಸಮಗ್ರ ಅಭಿವೃದ್ಧಿ ಸೇವೆಗಳು (ಐ.ಸಿ.ಡಿ.ಎಸ್)

ಮಗುವಿನ ಸಮಗ್ರ ಅಭಿವೃದ್ಧಿ ಸೇವೆಗಳು (ಐ.ಸಿ.ಡಿ.ಎಸ್) ಅಂಗನವಾಡಿ ಕೇಂದ್ರಗಳ ಮೂಲಕ ಆರು ವರ್ಷ ಮತ್ತು ಕೆಳಗಿನ ಮಕ್ಕಳಿಗೆ ಪೂರಕ ಪೌಷ್ಟಿಕತೆ, ಆರೋಗ್ಯ ರಕ್ಷಣೆ, ಮತ್ತು ಶಾಲೆಯ ಮುಂಚಿನ ಶಿಕ್ಷಣವನ್ನು ಒದಗಿಸುತ್ತದೆ. ಮಕ್ಕಳ ಸಮಗ್ರ ಸೇವೆಯ ಅಂಗವಾಗಿ, ಹರೆಯದ ಹೆಣ್ಣು ಮಕ್ಕಳು, ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೂ ಈ ಸೇವೆಯನ್ನು ನೀಡುತ್ತದೆ.

## ಮಧ್ಯಾಹ್ನದ ಬಿಸಿಯೂಟದ ಯೋಜನೆ (ಎಮ್.ಡಿ.ಎಮ್.ಎಸ್)

ಮಧ್ಯಾಹ್ನದ ಬಿಸಿಯೂಟದ ಯೋಜನೆ (ಎಮ್.ಡಿ.ಎಮ್.ಎಸ್) ಸರ್ಕಾರಿ ಅಥವ ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಪ್ರತಿಯೊಬ್ಬ ಪ್ರಾಥಮಿಕ ಶಾಲಾ ಮಗುವಿಗೆ ಪ್ರತಿ ದಿನವೂ ಪೌಷ್ಟಿಕ, ಬೇಯಿಸಿದ ಮಧ್ಯಾಹ್ನದ ಊಟವನ್ನು ಖಾತರಿ ಪಡಿಸುತ್ತದೆ.

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ಎಮ್.ಜಿ.ಎನ್.ಆರ್.ಇ.ಜಿ.ಎ)

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ಎಮ್.ಜಿ.ಎನ್.ಆರ್.ಇ.ಜಿ.ಎ) ಜನಸಂಖ್ಯೆಯ ನಿರ್ಗತಿಕರೆಂದು ಪರಿಗಣಿಸಲಾದ ಗ್ರಾಮೀಣ ಜನರಿಗೆ ಉದ್ಯೋಗ ಖಾತರಿಯನ್ನು ನೀಡುತ್ತದೆ. ಅವರ ಖರೀದಿಸುವ ಶಕ್ತಿಯನ್ನು ಹೆಚ್ಚಿಸಿ ಅದರಿಂದ ಅವರನ್ನು ಬಡತನದಿಂದ ಮೇಲೆತ್ತಲು ಈ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ.

## ಜಾಗೃತ ಸಮಿತಿ (ವಿಜಿಲೆನ್ಸ್ ಕಮಿಟಿ) ಎಂದರೇನು?

ಎನ್.ಎಫ್.ಎಸ್.ಎ ಕಾಯ್ದೆಯಡಿಯಲ್ಲಿ ತನ್ನ ಕಾರ್ಯವನ್ನು ಅನುಷ್ಠಾನ ಮತ್ತು ಮೇಲ್ವಿಚಾರಣೆ ಮಾಡಲು ಸಮುದಾಯದ ಮತ್ತು ಸರ್ಕಾರದ ಸಮಿತಿಗಳನ್ನು ಕಾನೂನು ಮೂಲಕ ಅಥಾವ ಆದೇಶದ ಮೂಲಕ ರಚನೆ ಮಾಡಬೇಕಾಗುತ್ತದೆ. ಇಂತಹ ಸಮಿತಿಗಳನ್ನು ಜಾಗೃತ ಸಮಿತಿಗಳು ಎಂದು ಕರೆಯುತ್ತಾರೆ. ಎನ್ ಎಫ್.ಎಸ್.ಎ ಕಾಯ್ದೆಯಲ್ಲಿ ಜಾಗೃತ ಸಮಿತಿಗಳನ್ನು ಸೆಕ್ಷನ್ 29 ರ ಅಡಿಯಲ್ಲಿ ರಚಿಸಲು ಸೂಚಿಸಲಾಗಿದೆ.

## ನ್ಯಾಯಬೆಲೆ ಅಂಗಡಿ ಹಂತದ ಜಾಗೃತ ಸಮಿತಿಯ ರಚನೆ ಹೇಗಿರುತ್ತದೆ?

ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಕಂಪ್ಯೂಟರಿಕೃತ ಆಯ್ಕೆ ಇರುತ್ತದೆ. ನ್ಯಾಯಬೆಲೆ ಅಂಗಡಿ ವ್ಯಾಪ್ತಿಯ ಎಲ್ಲಾ ಕಾರ್ಡುದಾರರ ಪೈಕಿ 18 ವರ್ಷ ಮೇಲ್ಪಟ್ಟ ಮೂರು ಕುಟುಂಬದ ಮುಖ್ಯಸ್ಥ ಮಹಿಳೆಯರನ್ನು ಆಯ್ಕೆಮಾಡಲಾಗುತ್ತದೆ.

ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಅಥವಾ ಪಂಚಾಯತ್ ಅಭಿವೃದ್ಧಿ ಅಧಿಕಾರಿ. ಪಂಚಾಯಿತಿಯಿಂದ ನಾಮನಿರ್ದೇಶಿತಗೊಂಡ ಸದಸ್ಯರು, ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ.

ನಗರ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಯು ಅಧಿಕಾರಿಯನ್ನು ನೇಮಿಸಬೇಕು ಇವರು ಬಿಲ್ ಕಲೆಕ್ಟರ್ ಗಳಿಗಿಂತ ಕಡಿಮೆ ಹಂತದ ಅಧಿಕಾರಿಯಾಗಿರಬಾರದು.

ಈ ಸಮಿತಿಯು ನಿರಂತರ ಸಮಿತಿಯಾಗಿದ್ದು, ಪ್ರತಿ ಆರು ತಿಂಗಳಿಗೊಮ್ಮೆ ಅದರ 1/3 ಸದಸ್ಯರನ್ನು ಬದಲಾಯಿಸಲಾಗುತ್ತದೆ.

## ನ್ಯಾಯಬೆಲೆ ಅಂಗಡಿ ಮಟ್ಟದ ಜಾಗೃತ ಸಮಿತಿ ಯಾವಾಗ ಸಭೆ ಸೇರುತ್ತದೆ?

ನ್ಯಾಯಬೆಲೆ ಅಂಗಡಿ ಮಟ್ಟದ ಸಮಿತಿ ಪ್ರತಿ ತಿಂಗಳ 7 ರಂದು ಸಭೆ ಸೇರುತ್ತದೆ. ಈ ರೀತಿಯ ಸಭೆಯನ್ನು ಆಹಾರ ಅದಾಲತ್ ಎಂದು ಕರೆಯಲಾಗುತ್ತದೆ.

**ತಾಲ್ಲೂಕು ಮಟ್ಟದ ಜಾಗೃತ ಸಮಿತಿ**

| ಕ್ರ.ಸಂ | ಹುದ್ದೆ | ಪದನಾಮ |
|---|---|---|
| 1 | ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು | ಅಧ್ಯಕ್ಷರು |
| 2 | ಅಧ್ಯಕ್ಷರು, ಪುರಸಭೆ ಅಥವಾ ನಗರ ಸಭೆ ನಗರ ಪಾಲಿಕೆ (ಸಿ.ಎಮ್.ಸಿ) | ಸದಸ್ಯರು |

| | | |
|---|---|---|
| 3 | ತಾಲ್ಲೂಕ್ ಪಂಚಾಯತ್ ನಿಂದ ಆಯ್ಕೆಯಾದವರಲ್ಲಿ ಒಬ್ಬರು ಮಹಿಳಾ ಸದಸ್ಯರು | ಸದಸ್ಯರು |
| 4 | ಪಟ್ಟಣ ಪಂಚಾಯಿತಿ ಅಥವಾ ನಗರ ಸಭೆ ನಗರ ಪಾಲಿಕೆ ನಿಂದ ಒಬ್ಬರು ಮಹಿಳಾ ಸದಸ್ಯರು (ಕೌನ್ಸಿಲ್ ನಿಂದ ಅಯ್ಕೆಯಾದ ಸದಸ್ಯರು) | ಸದಸ್ಯರು |
| 5 | ನ್ಯಾಯಬೆಲೆ ಅಂಗಡಿ ವ್ಯಾಪ್ತಿಯ ಜಾಗೃತಿ ಸಮಿತಿ ಸದಸ್ಯರು ಪ್ರತಿ ಹೋಬಳಿ/ತಾಲೂಕುಗಳಿಂದ (ಮೂರುಜನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಪ್ರತಿನಿಧಿಗಳು ಇರಲೇ ಬೇಕು) | 6 ಸದಸ್ಯರು |
| 6 | 5 ಜನ ಸಾಮಾಜಿಕ ಕಾರ್ಯಕರ್ತರು ಆಹಾರ ಹಕ್ಕಿನಡಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿರುವವರು. ಇದರಲ್ಲಿ 2 ಜನ ಮಹಿಳೆಯರು ಕಡ್ಡಾಯವಾಗಿರಬೇಕು. 1 ಪರಿಶಿಷ್ಟ ಜಾತಿ ಅಥಾವ ಬುಡಕಟ್ಟು ಜನಾಂಗದವರು 1 ಹಿಂದುಳಿದ ವರ್ಗದವರಿಗೆ. | 5 ಸದಸ್ಯರು |
| 7 | ತಾಲ್ಲೂಕು ಪಂಚಾಯತ್ ನಿರ್ವಹಣಾಧಿಕಾರಿ | ಸದಸ್ಯರು |
| 8 | ತಾಲ್ಲೂಕಿನ ತಹಸಿಲ್ದಾರ್ | ಸದಸ್ಯರು |

ತಾಲ್ಲೂಕು ಮಟ್ಟದಲ್ಲಿ ಮೂರು ತಿಂಗಳಿಗೊಮ್ಮೆ ಸಮಿತಿ ಸಭೆ ಸೇರುತ್ತದೆ. ತಾಲ್ಲೂಕು ಜಾಗೃತ ಸಮಿತಿಯ ಅಧಿಕಾರವಧಿಯು 2 ವರ್ಷಗಳಾಗಿರುತ್ತದೆ.

**ಪಾಲಿಕೆಗಳಲ್ಲಿ ಜಾಗೃತ ಸಮಿತಿ**

| ಕ್ರ.ಸಂ | ಹುದ್ದೆ | ಪದನಾಮ |
|---|---|---|
| 1 | ವಿಧಾನ ಸಭಾ ಶಾಸಕರು | ಅಧ್ಯಕ್ಷರು |
| 2 | ವಿಧಾನಸಭಾ ಕ್ಷೇತ್ರ ಪಾಲಿಕೆ ಸದಸ್ಯರುಗಳು | ಸದಸ್ಯರು |
| 3 | ವಿಧಾನ ಸಭಾ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿ ಜಾಗೃತ ಸಮತಿ ಸದಸ್ಯರು (ಕಡ್ಡಾಯವಾಗಿ ಇಬ್ಬರು ಸದಸ್ಯರು ಎಸ್.ಸಿ./ ಎಸ್.ಟಿ ಮತ್ತು ಹಿಂದುಳಿದ ವರ್ಗಗಳಿಂದ) | 4 ಜನ ಸದಸ್ಯರು |
| 4 | ಇಬ್ಬರು ಸಮಾಜ ಕಾರ್ಯಕರ್ತರು ಆಹಾರ ಭದ್ರತೆ ಕುರಿತಂತೆ ಕೆಲಸ ನಿರ್ವಹಿಸುತ್ತಿರುವವರು (ಕಡ್ಡಾಯವಾಗಿ ಒಬ್ಬರು ಸದಸ್ಯರು ಎಸ್.ಸಿ./ ಎಸ್.ಟಿ ಮತ್ತು ಹಿಂದುಳಿದ ವರ್ಗಗಳಿಂದ) | ಸದಸ್ಯರು |
| 5 | ಸಂಬಂಧಿಸಿದ ಆಹಾರ ನಿರೀಕ್ಷಕರು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರ ಇಲಾಖೆ | ಸದಸ್ಯರು |
| 6 | ವಿಭಾಗೀಯ ಅಧಿಕಾರಿ ಪಾಲಿಕೆಯ ನಾಮನಿರ್ದೇಶಿತ ಪಾಲಿಕೆಯ ಆಯುಕ್ತರು | ಸದಸ್ಯರು |

**ಜಿಲ್ಲಾ ಮಟ್ಟದ ಜಾಗೃತಾ ಸಮಿತಿ**

| ಕ್ರ.ಸಂ | ಹುದ್ದೆ | ಪದನಾಮ |
|---|---|---|
| 1 | ಜಿಲ್ಲಾ ಉಸ್ತುವಾರಿ ಸಚಿವರು | ಅಧ್ಯಕ್ಷರು |
| 2 | ಜಿಲ್ಲಾ ಪಂಚಾಯಿತಿ ಅಧ್ಯಕ್ಷರು | ಉಪಾಧ್ಯಕ್ಷರು |
| 3 | ಮೇಯರ್ ಅಥವಾ ಅಧ್ಯಕ್ಷರು ಜಿಲ್ಲಾ ಮುಖ್ಯ ಕಚೇರಿ ಮಹಾನಗರ ಪಾಲಿಕೆ ಅಥಾವ ನಗರ ಸಭೆ | ಉಪಾಧ್ಯಕ್ಷರು |
| 4 | ಇಬ್ಬರು ಶಾಸಕರು | ಸದಸ್ಯರು |
| 5 | ಜಿಲ್ಲಾಧಿಕಾರಿಗಳು | ಸದಸ್ಯರು |
| 6 | ಜಿಲ್ಲಾ ಪಂಚಾಯತ್ ನಿರ್ವಾಹಣಾಧಿಕಾರಿಗಳು (ಸಿ.ಇ.ಓ). ಜಿಲ್ಲಾ ಪಂಚಾಯತ್ | ಸದಸ್ಯರು |
| 7 | 3 ಜನ ತಾಲ್ಲೂಕು ಜಾಗೃತಾ ಸಮಿತಿಯಿಂದ ಮಹಿಳಾ ಪ್ರತಿನಿಧಿಗಳು ಕನಿಷ್ಠ ಒಬ್ಬರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಿಂದ ಬಂದಿರುವವರು | ಸದಸ್ಯರು |

| | | |
|---|---|---|
| 8 | 3 ಜನ ನ್ಯಾಯಬೆಲೆ ಅಂಗಡಿ ಹಂತದ ಜಾಗೃತಾ ಸಮಿತಿ ಸದಸ್ಯರು ಯಾವುದೆ 3 ತಾಲ್ಲೂಕಿನಿಂದ ಇವರಲ್ಲಿ ಒಬ್ಬರು ಪರಿಶಿಷ್ಟ ಜಾತಿ ಮತ್ತು ಪಂಗಡ ಸದಸ್ಯರು ಇರಬೇಕು | ಸದಸ್ಯರು |
| 9 | ಆಹಾರದ ಹಕ್ಕಿಗಾಗಿ ಕೆಲಸವನ್ನು ನಿರ್ವಹಿಸುತ್ತಿರುವ 5 ಜನ ಸಾಮಾಜಿಕ ಕಾರ್ಯಕರ್ತರು. ಇದರಲ್ಲಿ ಇಬ್ಬರು ಮಹಿಳೆಯರು, ಒಬ್ಬರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು. ಇನ್ನೊಬ್ಬರು ಇತರೆ ಹಿಂದುಳಿದ ಜಾತಿಗೆ ಸೇರಿರಬೇಕು. | ಸದಸ್ಯರು |
| 10 | ಉಪ ನಿರ್ದೇಶಕರು/ಜಂಟಿ ನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ | ಸದಸ್ಯ ಕಾರ್ಯದರ್ಶಿ |

ಜಿಲ್ಲಾ ಮಟ್ಟದಲ್ಲಿ ಮೂರು ತಿಂಗಳಿಗೊಮ್ಮೆ ಸಭೆಯನ್ನು ಸೇರುತ್ತದೆ. ಜಿಲ್ಲಾ ಜಾಗೃತಾ ಸಮಿತಿಯ ಅಧಿಕಾರಾವಧಿಯು 2 ವರ್ಷಗಳಾಗಿರುತ್ತದೆ.

**ರಾಜ್ಯಮಟ್ಟದ ಜಾಗೃತ ಸಮಿತಿ**

| ಕ್ರ.ಸಂ | ಹುದ್ದೆ | ಪದನಾಮ |
|---|---|---|
| 1 | ಉಸ್ತುವಾರಿ ಸಚಿವರು – ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಕಾನೂನು ಮಾಪನಶಾಸ್ತ್ರ ಇಲಾಖೆ | ಅಧ್ಯಕ್ಷರು |
| 2 | ಒಬ್ಬರು ಸಂಸತ್ ಸದಸ್ಯರು, ಒಬ್ಬರು ವಿಧಾನಸಭಾ ಸದಸ್ಯರು, ಒಬ್ಬರು ಪರಿಷತ್ ಸದಸ್ಯರು ರಾಜ್ಯದ ಅತಿ ಹಿಂದುಳಿದ ಭಾಗದಿಂದ ಬಂದಂತವರು | ಸದಸ್ಯರು |
| 3 | ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಕಾನೂನು ಮಾಪನಶಾಸ್ತ್ರ ಇಲಾಖೆ | ಸದಸ್ಯ ಕಾರ್ಯದರ್ಶಿ |
| 4 | ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 5 | ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿ ಸಹಕಾರ ಇಲಾಖೆ | ಸದಸ್ಯರು |
| 6 | ಅಧ್ಯಕ್ಷರು ರಾಜ್ಯ ಆಹಾರ ಆಯೋಗ | ಸದಸ್ಯರು |
| 7 | ವ್ಯವಸ್ಥಾಪಕ ನಿರ್ದೇಶಕರು ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕ ಸರಬರಾಜು ನಿಗಮ | ಸದಸ್ಯರು |
| 8 | ಜಿಲ್ಲಾ ಕುಂದುಕೊರತೆ ನಿವಾರಣಾಧಿಕಾರಿ (ಡಿ.ಜಿ.ಆರ್.ಓ) ನಾಲ್ಕು ಕಂದಾಯ ವಿಭಾಗಗಳಿಂದ (ಒಟ್ಟು ನಾಲ್ಕು ಜನರು) | ಸದಸ್ಯರು |
| 9 | ರಾಜ್ಯದಲ್ಲಿ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರವನ್ನು ನಡೆಸುತ್ತಿರುವ ಒಂದು ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ | ಸದಸ್ಯರು |
| 10 | ನ್ಯಾಯಬೆಲೆ ಅಂಗಡಿ ಹಂತದ ಜಾಗೃತ ಸಮಿತಿ ಸದಸ್ಯರು ನಾಲ್ಕು ಕಂದಾಯ ವಿಭಾಗಗಳಿಂದ (ಒಟ್ಟು ನಾಲ್ಕು ಜನರು) | ಸದಸ್ಯರು |
| 11 | ಜಿಲ್ಲಾ ಮಟ್ಟದ ಜಾಗೃತ ಸಮಿತಿ ಸದಸ್ಯರು ನಾಲ್ಕು ಕಂದಾಯ ವಿಭಾಗಗಳಿಂದ (ಒಟ್ಟು ನಾಲ್ಕು ಜನರು) | ಸದಸ್ಯರು |
| 12 | ತಾಲ್ಲೂಕು ಸಗಟು ಕೃಷಿ ಮಾರುಕಟ್ಟೆ ಸಹಕಾರಿ ಸಂಘಗಳ ನಾಮನಿರ್ದೇಶಿತ ಪ್ರತಿನಿಧಿ | ಸದಸ್ಯರು |
| 13 | 5 ಜನ ಸರ್ಕಾರೇತರ ವ್ಯಕ್ತಿಗಳು ಇದರಲ್ಲಿ ಇಬ್ಬರು ಮಹಿಳೆಯರು, ಒಬ್ಬರು ಪರಿಶಿಷ್ಟಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು. ಇನ್ನೊಬ್ಬರು ಇತರೆ ಹಿಂದುಳಿದ ಜಾತಿಗೆ ಸೇರಿರಬೇಕು. | ಸದಸ್ಯರು |

## ಜಾಗೃತ ಸಮಿತಿಯ ಸಾಮನ್ಯ ಕರ್ತವ್ಯಗಳಾವುವು?

- ಪಿಡಿಎಸ್ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಬೇಕು ಮತ್ತು ಸಮಸ್ಯೆಗಳನ್ನು ಪರಿಹರಿಸಬೇಕು.
- ಕಾರ್ಯನಿರ್ವಹಿಸುತ್ತಿರುವ ಪಿಡಿಎಸ್ ಅನ್ನು ಪರಿಶೀಲಿಸಿ, ನ್ಯಾಯ ಬೆಲೆ ಅಂಗಡಿಯ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಿ ಮೇಲಿನ ಎಲ್ಲಾ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವುದು.
- ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬರುವ ನಿಧಿಗಳ ಹರಿವು, ಹಂಚಿಕೆ ಮತ್ತು ಬಳಕೆಯನ್ನು ಮೇಲ್ವಿಚಾರಣೆ ಮಾಡಿ ಆಹಾರ ಭದ್ರತೆಗೆ ಅನುಕೂಲವಾಗುವ ಹಾಗೆ ಬಳಕೆಯಾಗುವಂತೆ ಮಾಡುವುದು.
- ಪಿಡಿಎಸ್ ಪ್ರಯೋಜನಗಳನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.
- ಸರಿಯಾದ ಫಲಾನುಭವಿಗಳಿಗೆ ಎಲ್ಲಾ ಉತ್ತೇಜಕಗಳು ಸಿಗುವ ರೀತಿಯಲ್ಲಿ ನೋಡಿಕೊಳ್ಳವುದು.
- ಎನ್.ಎಫ್.ಎಸ್. ಅನುಷ್ಠಾನದ ಬಗ್ಗೆ ದೂರುಗಳನ್ನು ಲಿಖಿತವಾಗಿ, ಮೌಖಿಕವಾಗಿ, ಮೊಬೈಲ್, ದೂರವಾಣಿ ಅಥವಾ ಇಮೇಲ್ ಮೂಲಕ ಸ್ವೀಕರಿಸಲು ಸೂಕ್ತವಾದ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದು.
- ಅಕ್ರಮಗಳನ್ನು ಕಂಡುಹಿಡಿಯಲು ನಿಯಮಿತವಾಗಿ ಕ್ಷೇತ್ರ ಭೇಟಿಗಳನ್ನು ನಡೆಸಿ ಆಯಾ ಹಂತದ ಜವಾಬ್ದಾರಿಗಳನ್ನು ಪೂರ್ಣಗೊಳಿಸುವುದು. (ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯದ ಜಾಗೃತ ಸಮಿತಿಗಳು)
- ಮಾಧ್ಯಮಗಳಲ್ಲಿ ಯಾವುದೇ ರೀತಿಯ ವರದಿಗಳು ಬಂದರೆ ತಕ್ಷಣ ಪರಿಶೀಲಿಸಿ ಅವುಗಳ ಬಗ್ಗೆ ಸುಓ–ಮೋಟೋ ದೂರು ತೆಗೆದುಕೊಂಡು ಕ್ರಮ ತೆಗೆದುಕೊಳ್ಳುವುದು.
- ತಪ್ಪಿತಸ್ಥರೆಂದು ಕಂಡುಬಂದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡವುದು.

## ನ್ಯಾಯಬೆಲೆ ಅಂಗಡಿ, ತಾಲ್ಲೂಕು, ಪಾಲಿಕೆ ಮತ್ತು ಜಿಲ್ಲಾ ಮತ್ತು ರಾಜ್ಯ ಮಟ್ಟದ ಜಾಗೃತ ಸಮಿತಿಯ ಜವಾಬ್ದಾರಿ ಮತ್ತು ಕರ್ತವ್ಯಗಳು

- ಕೇಂದ್ರಸರ್ಕಾರವು ಎರಡುಹೊತ್ತು ಊಟಕ್ಕೆ ಗತಿಯಿಲ್ಲದ ಅತ್ಯಂತ ಕಡುಬಡವರಿಗಾಗಿ ಅಂತ್ಯೋದಯ ಅನ್ನ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದಲ್ಲಿ ಸದರಿ ಯೋಜನೆಯನ್ನು ಆಗಸ್ಟ್ 2002 ರಿಂದ ಜಾರಿಗೊಳಿಸಲಾಗಿದೆ. ಬಡತನ ರೇಖೆಯಲ್ಲಿ ಅತ್ಯಂತ ಕೆಳಗಿನ ಸ್ತರದ ಕುಟುಂಬಗಳಾದ ಭೂ ರಹಿತ ಕೃಷಿ ಕಾರ್ಮಿಕರು, ವಿಧವೆಯು ಮುಖ್ಯಸ್ಥರಾಗಿರುವ ಕುಟುಂಬಗಳು, ಯಾವುದೇ ನಿರ್ದಿಷ್ಟ ವರಮಾನವಿಲ್ಲದ ಹೆಚ್.ಐ.ವಿ. ಪೀಡಿತರು/ಬಾಧಿತರು ಇರುವ ಕುಟುಂಬಗಳು, ಯಾವುದೇ ನಿಗದಿತ ವರಮಾನವಿಲ್ಲದ ವೃದ್ಧರು ಮುಖ್ಯಸ್ಥರಾಗಿರುವ ಕುಟುಂಬಗಳು ಈ ಯೋಜನೆಯ ವ್ಯಾಪ್ತಿಗೆ ಸೇರ್ಪಡೆಯಾಗಿರುತ್ತಾರೆ. ಇಂತಹ ಫಲಾನುಭವಿಗಳನ್ನು ಗ್ರಾಮ ಪಂಚಾಯ್ತಿಯವರು ಗ್ರಾಮ ಸಭೆಯಲ್ಲಿ ಗುರುತಿಸಿ ಶಿಫಾರಸ್ಸು ಮಾಡಿರುತ್ತಾರೆ. ಈ ರೀತಿ ಶಿಫಾರಸ್ಸು ಮಾಡಿದವರಲ್ಲಿ ಎಲ್ಲರೂ ಅರ್ಹರೇ ಮತ್ತು ನಿಜವಾದ ಅರ್ಹ ಫಲಾನುಭವಿಗಳಿಗೆ ಈ ಯೋಜನೆಯ ಸೌಲಭ್ಯವು ಸಿಗುವಂತೆ ಮಾಡುವುದು.
- ಆದ್ಯತಾ ಕುಟುಂಬ (ಬಿ.ಪಿ.ಎಲ್) ಪಡಿತರ ಚೀಟಿದಾರರನ್ನು ಗುರುತಿಸಲು ಸರ್ಕಾರದ ಆದೇಶ ಸಂಖ್ಯೆ: ಆನಾಸ/80/ಡಿ.ಆರ್.ಎ./2012, ದಿನಾಂಕ 24.08.2012ರನ್ವಯ 14 ಅಂಶಗಳ ಮಾನದಂಡವನ್ನು ನಿಗದಿಪಡಿಸಲಾಗಿತ್ತು. ಸದರಿ ಮಾನದಂಡಗಳನ್ನು ಸಡಿಲಗೊಳಿಸಿ ಸರ್ಕಾರದ ಆದೇಶ ಸಂಖ್ಯೆ: ಆನಾಸ/116/ಡಿ.ಆರ್.ಎ./2015, ದಿನಾಂಕ: 25.03.2017ರಲ್ಲಿ 04 ಅಂಶಗಳ ಮಾನದಂಡಗಳನ್ನು ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.
- ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ವ್ಯಾಟ್/ ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.
- ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.
- ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.
- ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.
- ಈ ಮೇಲ್ಕಂಡ ಅಂಶಗಳು ಸರಿಯಾದ ರೀತಿಯಲ್ಲಿ ಪರಿಶೀಲಿಸಿ ಸೂಕ್ತವಾದ ಫಲಾನುಭವಿಗಳಿಗೆ ಸಿಗುವಂತೆ ಮಾಡುವುದು ಮತ್ತು ಯೋಜನೆಯ ಅನುಷ್ಠಾನದ ಮೇಲುಸ್ತುವಾರಿಯನ್ನು ಮಾಡುವುದು.
- ರಾಜ್ಯಾದ್ಯಂತ ಏಕರೂಪದ ಸೀಮೆ ಎಣ್ಣೆ ವಿತರಣಾ ದರವನ್ನು ಜಾರಿಗೊಳಿಸಲಾಗಿದೆ. ಪ್ರಸ್ತುತ ಅನಿಲ ರಹಿತ ಆದ್ಯತಾ ಮತ್ತು ಅಂತ್ಯೋದಯ ಪಡಿತರ ಚೀಟಿಗಳಿಗೆ ಪ್ರತಿ ಮಾಹೆ 3 ಲೀಟರಿನಂತೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ನೋಂದಣಿಗೊಂಡಿರುವ ಅನಿಲ

ಸಂಪರ್ಕ ಹೊಂದಿರುವ ಯಾವುದೇ ವರ್ಗದ ಪಡಿತರ ಚೀಟಿದಾರರಿಗೆ ಒಂದು ಲೀಟರ್ ಸೀಮೆಎಣ್ಣೆಯನ್ನು ಪ್ರತಿ ಲೀಟರಿಗೆ ರೂ.35/–ರ ದರದಲ್ಲಿ ವಿತರಿಸಲಾಗುತ್ತಿದೆ. ಈ ಯೋಜನೆಯು ಸರಿಯಾದ ರೀತಿಯಲ್ಲಿ ನಡೆಯುತ್ತಿದೆಯೇ ಹಾಗು ಅರ್ಹ ಫಲಾನುಭಾವಿಗಳಿಗೆ ಸಿಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಮೇಲುಸ್ತುವಾರಿಯನ್ನು ಮಾಡುವುದು.

- ಸರ್ಕಾರದ ಆದೇಶಸಂಖ್ಯೆ: ಆನಾಸ/36/ಆರ್ಪಿಆರ್/2016 ದಿ: 6/10/2016 ರನ್ವಯ ಚಿಲ್ಲರೆ ಸಾಗಾಣಿಕೆ ಮಾಡುತ್ತಿರುವ ನ್ಯಾಯಬೆಲೆ ಅಂಗಡಿಯವರಿಗೆ ಸಾಗಾಣಿಕೆ ದರ 0–10 ಕಿ.ಮೀ ರವರೆಗೆ ಕನಿಷ್ಠ ದರ ಪ್ರತಿ ಕ್ವಿಂಟಾಲ್ ಪ್ರತಿ ಕಿಲೋ ಮೀಟರಿಗೆ ರೂ. 14/– ರಂತೆ ಹಾಗೂ 11ನೇ ಕಿ.ಮೀ.ನಿಂದ ನಂತರ ಕ್ರಮಿಸುವ ದೂರಕ್ಕೆ ಪ್ರತಿ ಕ್ವಿಂಟಾಲಿಗೆ ಪ್ರತಿ ಕಿ.ಮೀ. ಗೆ ರೂ.1.40/– ರಂತೆ ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ. ಅದೇ ರೀತಿ ಆಹಾರಧಾನ್ಯಗಳ ಲೋಡಿಂಗ್ ಮತ್ತು ಅನ್ಲೋಡಿಂಗ್ ಹಮಾಲಿ ದರ ಪ್ರತಿ ಕ್ವಿಂಟಾಲಿಗೆ ರೂ. 14/– ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಪಡಿತರ ಅಂಗಡಿ ಮಾಲಿಕರು ಫಲನುಭವಿಗಳಿಂದ ಯಾವುದೇ ಹಣವನ್ನು ಮೇಲಿನ ವೆಚ್ಚಗಳಿಗೆ ಪಡೆಯದಿರುವಂತೆ ಸೂಚಿಸುವುದು. ಹಣ ತೆಗೆದುಕೊಂಡ ಪಕ್ಷದಲ್ಲಿ ಸೂಕ್ತವಾದ ಕಾನೂನು ಕ್ರಮಗಳನ್ನು ಕೈಗೊಳ್ಳವುದು.

- ಸಾರ್ವಜನಿಕ ವಿತರಣಾ ವ್ಯವಸ್ಥೆಯ ಗಣಕೀಕರಣದಡಿ ಪಡಿತರ ಚೀಟಿದಾರರ ದತ್ತಾಂಶವನ್ನು ಸಿದ್ಧಪಡಿಸಲಾಗಿರುತ್ತದೆ. ಪ್ರತಿ ಫಲಾನುಭವಿಯ ಆಧಾರ್ ಸಂಖ್ಯೆಯನ್ನು ಪಡಿತರ ಚೀಟಿಯೊಂದಿಗೆ ಜೋಡಿಸಲಾಗುತ್ತಿದೆ. ಎಪಿಎಲ್ ಪಡಿತರ ಚೀಟಿ ಕೋರಿ ಆನ್‌ಲೈನ್‌ನಲ್ಲಿ ಅರ್ಜಿದಾರರು ಅರ್ಜಿ ಸಲ್ಲಿಸಿ ತಮ್ಮ ಪಡಿತರ ಚೀಟಿಯ ಮುದ್ರಿತ ಪ್ರತಿಯನ್ನು ಓಟಿಪಿ ಸೃಜಿಸಿ ತಾವೇ ಪಡೆದುಕೊಳ್ಳಬಹುದಾಗಿರುತ್ತದೆ. ಪಿಹೆಚ್ಹೆಚ್ ಪಡಿತರ ಚೀಟಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವ್ಯವಸ್ಥೆ, ಗೋದಾಮುಗಳಲ್ಲಿ ಗಣಕಯಂತ್ರಗಳ ಅಳವಡಿಕೆ ಮತ್ತು ಆನ್ಲೈನ್ ಬಿಲ್ಲಿಂಗ್ ಹಾಗೂ ಹಂತ ಹಂತವಾಗಿ ನ್ಯಾಯಬೆಲೆ ಅಂಗಡಿಗಳಲ್ಲಿ ಪಿಓಎಸ್ ಯಂತ್ರಗಳ ಅಳವಡಿಕೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

- ಪಡಿತರ ಚೀಟಿಯನ್ನು ಪಡೆದುಕೊಳ್ಳುವ ವಿಧಾನದ ಕುರಿತು ಜನರಲ್ಲಿ ಅರಿವುಮೂಡಿಸಿ ಅರ್ಹಫಲಾನುಭವಿಗಳಿಗೆ ಪಡಿತರ ಸಿಗುವಂತೆ ನೋಡಿಕೊಳ್ಳುವುದು ಮತ್ತು ವಿವಿಧ ಹಂತದ ಅಧಿಕಾರಿಗಳನ್ನು ಸಂಪರ್ಕದಲ್ಲಿಟ್ಟುಕೊಂಡು ಯಾವುದೇ ರೀತಿಯ ಅಕ್ರಮ ನಡೆಯದಂತೆ ನೋಡಿಕೊಳ್ಳುವುದು.

- ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್ಡಿಎಸ್/17/ಆರ್ಪಿಆರ್/2011(1) ದಿನಾಂಕ: 10–06–2016 ರನ್ವಯ ರಾಜ್ಯ ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ನಿಗಮ ಅಥವಾ ಕಂಪನಿಗಳು ಅಥವಾ ಗ್ರಾಮ ಪಂಚಾಯ್ತಿ/ನಗರ ಸ್ಥಳೀಯ ಸಂಸ್ಥೆಗಳು, ಪ್ರಾಥಮಿಕ ಕೃಷಿ ಸಹಕಾರ ಸಂಘ, ತೋಟಗಾರಿಕಾ ಬೆಳೆಗಾರರ ಸಹಕಾರ ಮಾರುಕಟ್ಟೆ ಮತ್ತು ಸಂಸ್ಕರಣಾ ಸಹಕಾರ ಸಂಘ ನಿಯಮಿತ, ಹಾಲು ಉತ್ಪಾದಕರ ಸಹಕಾರ ಸಂಘ (ನಿ.) ಕೆ.ಎಂ.ಎಫ್., ತಾಲ್ಲೂಕು ಕೃಷಿ ಪ್ರಾಥಮಿಕ ಸಹಕಾರ ಮಾರುಕಟ್ಟೆ ಸಂಘ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಮಾನ್ಯತೆ ಪಡೆದ ಸ್ತ್ರೀಶಕ್ತಿ ಗುಂಪುಗಳು/ಸ್ವಸಹಾಯ ಸಂಘಗಳಿಗೆ ಆದ್ಯತೆ ನೀಡಲಾಗಿರುತ್ತದೆ. ಈ ನಿಟ್ಟಿನಲ್ಲಿ ಪಡಿತರ ನೀಡುವ ವ್ಯವಸ್ಥೆಯಲ್ಲಿ ಯಾವುದೇ ವಿಳಂಬವಾಗದಂತೆ ತಮ್ಮ ತಮ್ಮ ಗ್ರಾಮದಲ್ಲಿ ಕಾರ್ಡ್ ಹೊಂದಿದ ಕುಟುಂಬಗಳಿಗೆ ಪೂರಕವಾಗಿ ನ್ಯಾಯಬೆಲೆ ಅಂಗಡಿಗಳು ನಿರ್ಮಾಣವಾಗಿವೆಯೇ ಎಂಬುದನ್ನು ಖಚಿತ ಪಡಿಸಿಕೊಂಡು ಇಲ್ಲವಾದಲ್ಲಿ ಅವುಗಳ ಸ್ಥಾಪನೆಗೆ ಮುಂದಾಗಬೇಕು.

- ಸರ್ಕಾರದ ಆದೇಶ ಸಂಖ್ಯೆ ಆನಾಸ 284 ಡಿಆರ್ 2014 ದಿನಾಂಕ 26–04–2016ರ ರೀತ್ಯಾ ಪಡಿತರ ಚೀಟಿದಾರರಿಗೆ ಪಡಿತರ ವಸ್ತುಗಳನ್ನು ಸಕಾಲದಲ್ಲಿ ಪೂರೈಸುವ ಸಲುವಾಗಿ ಸರ್ಕಾರವು ಪಡಿತರ ಖಾತ್ರಿ ಯೋಜನೆಯನ್ನು ದಿನಾಂಕ: 01–05–2016 ರಿಂದ ಈ ಕೆಳಗಿನಂತೆ ಅನುಷ್ಠಾನಗೊಳಿಸಿ ಆದೇಶಿಸಿರುತ್ತದೆ. ಅದರನ್ವಯ,

  - ಎಲ್ಲಾ ನ್ಯಾಯಬೆಲೆ ಅಂಗಡಿಗಳು ಪಡಿತರ ಆಹಾರ ವಸ್ತುಗಳನ್ನು ಪ್ರತಿ ಮಾಹೆಯ ಮೊದಲ ದಿನದಿಂದಲೇ ವಿತರಿಸತಕ್ಕದ್ದು.

  - ಪಡಿತರ ಖಾತರಿ ಯೋಜನೆ ಆದೇಶವನ್ನು ಪರಿಷ್ಕರಿಸಿ ಸರ್ಕಾರದ ಮಾರ್ಪಾಡು ಆದೇಶ ಸಂಖ್ಯೆ:ಆನಾಸ/284/ಡಿಆ/2014, ದಿನಾಂಕ: 28.06.2018ರಲ್ಲಿ ನ್ಯಾಯಬೆಲೆ ಅಂಗಡಿ ಕಾರ್ಯನಿರ್ವಹಿಸುವ ಎಲ್ಲಾ ದಿನಗಳಲ್ಲೂ ಬೆಳಿಗ್ಗೆ 07 ರಿಂದ ಮಧ್ಯಾಹ್ನ 12:00 ಗಂಟೆಯವರೆಗೆ ಮತ್ತು ಸಂಜೆ 4:00 ರಿಂದ ರಾತ್ರಿ 8:00 ಗಂಟೆಯವರೆಗೆ ತಪ್ಪದೇ ನ್ಯಾಯಬೆಲೆ ಅಂಗಡಿ ತೆರೆಯತಕ್ಕದ್ದು (ಪ್ರತಿ ಮಂಗಳವಾರ ಮತ್ತು ರಾಜ್ಯ ಸರ್ಕಾರದ ಇತರೇ ರಜಾ ದಿನಗಳನ್ನು ಹೊರತುಪಡಿಸಿ). ಈ ಮೇಲ್ಕಂಡ ನಿಯಮಾನುಸಾರ ಎಲ್ಲಾ ನ್ಯಾಯಬೆಲೆ ಅಂಗಡಿಗಳ ಕಾರ್ಯನಿರ್ವಹಣೆಯ ಬಗ್ಗೆ ಮೇಲುಸ್ತುವಾರಿಯನ್ನು ನಡೆಸುವುದು.

  - ಸರ್ಕಾರದ ಆದೇಶ ಸಂಖ್ಯೆ ಆನಾಸ 125 ಡಿಆರ್ 2014 ದಿನಾಂಕ 9–6–2014 ರನ್ವಯ ಪಡಿತರ ಚೀಟಿದಾರರ ಸಮಸ್ಯೆಗಳನ್ನು ಬಗೆಹರಿಸುವ ವೇದಿಕೆಯಾಗಿ ಪ್ರತಿ ತಿಂಗಳು 7ನೇ ತಾರೀಖಿನಂದು ನ್ಯಾಯಬೆಲೆ ಅಂಗಡಿ ಮಟ್ಟದ ಆಹಾರ ಅದಾಲತ್‌ಗಳನ್ನು ಓರ್ವ ಸರ್ಕಾರಿ ಅಧಿಕಾರಿಯ ಸಮಕ್ಷಮದಲ್ಲಿ ನಡೆಸಲಾಗುತ್ತಿದೆ.

  - ಅನ್ನಭಾಗ್ಯ ಆದಾಲತ್‌ನಲ್ಲಿ ಈ ಕೆಳಗಿನ ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸಲಾಗುತ್ತಿದೆ.

  - ಪಡಿತರ ಚೀಟಿ ಮತ್ತು ನ್ಯಾಯಬೆಲೆ ಅಂಗಡಿಯ ಮೇಲಿನ ದೂರುಗಳು

  - ಪಡಿತರ ಚೀಟಿದಾರರ ಹಕ್ಕಿನಂತೆ ವಿತರಿಸಬೇಕಾದ ಪಡಿತರ ವಸ್ತುಗಳ ಗುಣಮಟ್ಟ, ದರ ಮತ್ತು ವಿತರಣಾ ಪ್ರಮಾಣಗಳನ್ನು ಕುರಿತ ದೂರುಗಳು

- ಪಡಿತರ ವಸ್ತುಗಳ ತೂಕ/ಅಳತೆಗೆ ಸಂಬಂಧಿಸಿದ ದೂರುಗಳು
- ನ್ಯಾಯಬೆಲೆ ಅಂಗಡಿಗಳು ನಿಗಧಿತ ವೇಳೆಯಲ್ಲಿ ಕಾರ್ಯನಿರ್ವಹಿಸದಿರುವ ಬಗೆಗಿನ ದೂರುಗಳು
- ಅನರ್ಹ/ನಕಲಿ ಪಡಿತರ ಚೀಟಿಗಳು ಮತ್ತು ಪಡಿತರ ವಸ್ತುಗಳ ದುರ್ಬಳಕೆ ಕುರಿತ ದೂರುಗಳು
- ನ್ಯಾಯಬೆಲೆ ಅಂಗಡಿ ಮಟ್ಟದ ಜಾಗೃತಿ ಸಮಿತಿಗಳ ಕಾರ್ಯನಿರ್ವಹಣೆ

- ಅನ್ನಭಾಗ್ಯ ಅದಾಲತ್ ನಡೆಸುವ ಅಧಿಕಾರಿಯು ಅದಾಲತ್‌ನಲ್ಲಿ ಕಂಡು ಬಂದ ದೂರುಗಳ ಕುರಿತು ಸಂಬಂಧಿಸಿದ ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕಾಗುತ್ತದೆ. ಜಿಲ್ಲಾಧಿಕಾರಿಗಳು ಅನ್ನಭಾಗ್ಯ ಅದಾಲತ್ ದೂರುಗಳನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಾರೆ. ಈ ಪ್ರಕ್ರಿಯೆಯನ್ನು ಸುಗಮಗೊಳಿಸಲು ಪ್ರತಿ ಮಾಹೆ ಅದಾಲತ್‌ಗಳನ್ನು ನಡೆಸಲು ಮತ್ತು ಸಮುದಾಯಕ್ಕೆ ಅರಿವನ್ನು ನೀಡಲು ಕ್ರಮಗಳನ್ನು ಕೈಗೊಳ್ಳಬೇಕು.

- ಪಡಿತರ ಸೋರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ಅನರ್ಹ ಪಡಿತರ ಚೀಟಿಗಳನ್ನು ಪತ್ತೆಹಚ್ಚಲು ಬಹುಮಾನ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಪತ್ತೆಯಾದ ಪ್ರತಿ ಅನರ್ಹ ಪಡಿತರ ಚೀಟಿಗೆ ಮಾಹಿತಿದಾರರಿಗೆ ರೂ.400/– ನಗದು ಬಹುಮಾನ ನೀಡಲಾಗುತ್ತದೆ. ಅಲ್ಲದೇ, ಅಕ್ರಮ ಸಾಗಾಣಿಕೆ/ಕಾಳಸಂತೆಯಲ್ಲಿ ಪಡಿತರ ಮಾರಾಟವನ್ನು ಪತ್ತೆ ಮಾಡಿ ಮಾಹಿತಿ ನೀಡುವ ಸಾರ್ವಜನಿಕರಿಗೆ ಪ್ರಕರಣವು ಸಾಬೀತಾದ ನಂತರ ಒಟ್ಟು ದಾಸ್ತಾನಿನ ಮೌಲ್ಯದ ಶೇಕಡ 5 ರಷ್ಟು ನಗದು ಬಹುಮಾನವನ್ನು ನೀಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇದನ್ನು ಸಮುದಾಯಕ್ಕೆ ಮತ್ತು ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಮಾಹಿತಿಯನ್ನು ನೀಡುವುದು.

- ಪ್ರಿವೆಂಶನ್ ಆಫ್ ಬ್ಲಾಕ್ ಮಾರ್ಕೆಟಿಂಗ್ ಆಂಡ್ ಮೇಂಟೆನೆಂಸ್ ಆಫ್ ಸಪ್ಲೈ ಆಫ್ ಎಸ್ಸೆಂಶಿಯಲ್ ಕಮ್ಮೊಡಿಟೀಸ್ ಆಕ್ಟ್, 1980ಯ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಿರುವ ಸರ್ಕಾರದ ಆದೇಶಗಳನ್ನು ಹೊರಡಿಸಿ ಸದರಿ ಕಾಯ್ದೆಯನ್ವಯ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಕಾರ್ಯನಿರ್ವಾಹಕ ಅಧಿಕಾರಿ/ಸಿಬ್ಬಂದಿಗಳಿಗೆ ಸೂಚನೆ ನೀಡಿರುತ್ತದೆ. ಈ ಕಾಯ್ದೆಯು ಪರಿಪೂರ್ಣವಾಗಿ ಜಾರಿಗೊಳ್ಳುವಂತೆ ನೋಡಿಕೊಳ್ಳುವುದು.

- ಅನ್ನಭಾಗ್ಯ ಯೋಜನೆಯಡಿ ಯಾವುದಾದರೂ ದೂರುಗಳಿದ್ದಲ್ಲಿ ಸದರಿ ದೂರುಗಳನ್ನು ದಾಖಲಿಸಲು "ಸಹಾಯವಾಣಿ" ಉಚಿತ ದೂರವಾಣಿ ಸಂಖ್ಯೆ 1967 ಹಾಗೂ 1800 425 9339ಕ್ಕೆ ಕರೆನೀಡುವ ಸೌಲಭ್ಯವನ್ನು ಒದಗಿಸಲಾಗಿದೆ. ಇಲಾಖೆಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕಸಹ ದೂರುಗಳನ್ನು ಸಲ್ಲಿಸುವ ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯದ ಕುರಿತು ನಾಗರೀಕರಲ್ಲಿ ಅರಿವನ್ನು ಮೂಡಿಸಿ ಸರಿಯಾದ ಕ್ರಮದಲ್ಲಿ ದೂರುದಾಖಲಾಗಿ ಪರಿಹಾರ ಒದಗುವಂತೆ ಕ್ರಮಗಳನ್ನು ಕೈಗೊಳ್ಳುವುದು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಗಳಲ್ಲಿ ಜಾಗೃತ ಸಮಿತಿಯು

- ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿಗಳಲ್ಲಿ ನೋಂದಣಿ ಮಾಡಿಕೊಳ್ಳುವಂತೆ ಜಾಗೃತಿಯನ್ನು ಮೂಡಿಸುವುದು.

- ಅಂಗನವಾಡಿಗಳಲ್ಲಿ ನೋಂದಾಯಿಸಿಕೊಂಡ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರದ ಭಾಗವಾಗಿ ಪೌಷ್ಟಿಕತೆಯ ತಿಳುವಳಿಕೆ ಕಾರ್ಯಕ್ರಮಗಳು, ತಾಯಂದಿರ ಸಭೆಗಳನ್ನು ನಡೆಸುವುದು, ಅನ್ನಪ್ರಾಶನ, ಪೋಷಣ್‌ದಿವಸ್, ಮಕ್ಕಳಿಗೆ ಎದೆಹಾಲಿನ ಮಹತ್ವ, ಪೂರಕ ಪೌಷ್ಟಿಕ ಆಹಾರ ತಯಾರಿಸುವ ಜ್ಞಾನ ಮತ್ತು ಕೌಶಲ್ಯಗಳನ್ನು ಪ್ರಾತ್ಯಕ್ಷತೆಯ ಮೂಲಕ ಕಲಿಸಲಾಗುತ್ತದೆ. ಈ ಕಾರ್ಯಕ್ರಮಗಳನ್ನು ಗ್ರಾಮದ ಎಲ್ಲಾ ಗರ್ಭಿಣಿಯರು ಮತ್ತು ಬಾಣಂತಿಯರು ಪಡೆದುಕೊಳ್ಳುವಂತೆ ಕ್ರಮವಹಿಸುವುದು.

- ಮಾತೃಪೂರ್ಣ ಯೋಜನೆಯಡಿಯಲ್ಲಿ ನೊಂದಣಿಯಾದ ಎಲ್ಲಾ ಗರ್ಭಿಣಿಯರು ಹಾಗೂ 6 ತಿಂಗಳವರೆಗಿನ ಬಾಣಂತಿಯರಿಗೆ ಪ್ರತಿದಿನ 21ರ ಘಟಕ ವೆಚ್ಚದಲ್ಲಿ ಅಂಗನವಾಡಿಯಲ್ಲಿಯೇ ಬಿಸಿಯೂಟವನ್ನು ತಯಾರಿಸಿ ವಿತರಿಸಲಾಗುತ್ತಿದೆ (ಒಂದು ಬಿಸಿ ಊಟವು ಅನ್ನ, ಬೇಳೆ ಸಾಂಬಾರ್, ಹಸಿರು ತರಕಾರಿ ಪಲ್ಯ, 200 ಮಿ.ಗ್ರಾಂ ಹಾಲು, ಬೇಯಿಸಿದ ಮೊಟ್ಟೆ ಹಾಗೂ ಕಡಲೆಬೀಜ ಹಾಗೂ ಬೆಲ್ಲದಿಂದ ಮಾಡಿದ ಚಿಕ್ಕಿಯನ್ನು ಒಳಗೊಂಡಿದೆ). ಈ ಯೋಜನೆಯು ಗ್ರಾಮದ ಎಲ್ಲ ಗರ್ಭಿಣಿಯರು ಮತ್ತು ಬಾಣಂತಿಯರು ಉಪಯೋಗಿಸಿಕೊಳ್ಳುವಂತೆ ಜಾಗೃತಿಯನ್ನು ಮೂಡಿಸಿ ಯೋಜನೆಯ ಅನುಷ್ಠಾನ ಸರಿಯಾದ ರೀತಿಯಲ್ಲಿ ಆಗುತ್ತಿದ್ದೆಯೇ ಎಂಬುದನ್ನು ಖಾತರಿ ಪಡಿಸಿಕೊಳ್ಳುವುದು.

- ಅಂಗನವಾಡಿ ಕೇಂದ್ರಗಳಲ್ಲಿ ದಾಸ್ತಾನು ಲಭ್ಯತೆ ಮತ್ತು ಪೌಷ್ಟಿಕ ಆಹಾರ ಕುರಿತಾದ ಯೋಜನೆಗಳು ಸರಿಯಾದ ರೀತಿಯಲ್ಲಿ ಅನುಷ್ಠಾನ ಗೊಳುತ್ತಿವೆಯೇ ಎಂಬುದನ್ನು ಖಾತರಿ ಪಡಿಸಿಕೊಳ್ಳವುದು.

- ಅಂಗನವಾಡಿ ಕೇಂದ್ರ ಹಾಗೂ ಶಾಲೆಗಳಲ್ಲಿ ಸ್ವಚ್ಛತೆಯಿಂದ ಕೂಡಿದ ಆಹಾರ ಸಂಗ್ರಹ ಕೊಠಡಿ ಮತ್ತು ಅಡುಗೆ ಮನೆ ಸೌಲಭ್ಯಗಳನ್ನು ಪರಿಶೀಲಿಸುವುದು. ಇಲ್ಲದೇ ಇದ್ದ ಪಕ್ಷದಲ್ಲಿ ಸಂಬಂಧಿಸಿದ ಇಲಾಖೆಗೆ ಮಾಹಿತಿಯನ್ನು ಒದಗಿಸುವುದು.

- ಮಕ್ಕಳ ಬೆಳವಣಿಗೆ ಮತ್ತು ನಿರ್ವಹಣೆಗೆ ಮನೆಗೆ ಕೊಡುವ ಪಡಿತರ ಆಹಾರ, ಇತರೆ ಯೋಜನೆಗಳ ಅನುಷ್ಠಾನಗಳ ಬಗ್ಗೆ ಪಂಚಾಯತ್, ತಾಲ್ಲೂಕು ಮತ್ತು ಜಿಲ್ಲೆಗಳ ಅಧಿಕಾರಿಗಳ ಜೊತೆ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳುವುದು.




- ರಾಜ್ಯದ 137 ಮಹಿಳಾ ಪೂರಕ ಪೌಷ್ಟಿಕ ಆಹಾರ ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳ (ಎಂ.ಎಸ್.ಪಿ.ಟಿ.ಸಿ) ಮೂಲಕ ಸಂಸ್ಕರಿಸಿದ ಇಲಾಖೆಯ ಮಾರ್ಗಸೂಚಿಗಳಂತೆ ಸಿದ್ದಪಡಿಸಿದ ಪೂರಕ ಪೌಷ್ಟಿಕ ಆಹಾರವನ್ನು ಪಡೆಯಲಾಗುತ್ತದೆ. ತಮ್ಮ ತಾಲ್ಲೂಕಿನಲ್ಲಿರುವ ಈ ಕೇಂದ್ರವು ಸರಿಯಾದ ಕ್ರಮದಲ್ಲಿ ಉತ್ತಮ ಗುಣಮಟ್ಟದ ಆಹಾರವನ್ನು ತಯಾರಿಸಿ ನೀಡುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಅವುಗಳ ಕಾರ್ಯನಿರ್ವಹಣೆ ಸರಿಯಾದ ರೀತಿಯಲ್ಲಿ ಆಗುತ್ತಿದೆಯೇ ಎಂದು ಪರಿಶೀಲಿಸುವುದು.

- ಅಂಗನವಾಡಿ ಕೇಂದ್ರದಲ್ಲಿ 6 ತಿಂಗಳಿನಿಂದ 3 ವರ್ಷದೊಳಗಿನ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರವನ್ನು ವಿತರಿಸಲಾಗುತ್ತಿದೆ. ಪ್ರತಿ ದಿನ ರೂ. 8 ರ ಮೌಲ್ಯದಂತೆ 25 ದಿನಗಳಿಗೆ ಪುಷ್ಟಿ ಪೌಷ್ಟಿಕ ಪುಡಿಯ ಪೊಟ್ಟಣ ಮನೆಗೆ ಕೊಡಲಾಗುತ್ತದೆ. ಈ ಯೋಜನೆಯು ಸರಿಯಾದ ಕ್ರಮದಲ್ಲಿ ಗ್ರಾಮದಲ್ಲಿರುವ ಎಲ್ಲಾ ಮಕ್ಕಳಿಗೆ ಸಿಗುವಂತೆ ನೋಡಿಕೊಳ್ಳುವುದು ಮತ್ತು ಯೋಜನೆಯ ಸಮರ್ಪಕವಾದ ಅನುಷ್ಠಾನಕ್ಕಾಗಿ ಆಗ್ಗಿಂದಾಗೆ ಅಂಗನವಾಡಿ ಕೇಂದ್ರಗಳಿಗೆ ಬೇಟಿಯನ್ನು ನೀಡುವುದು.

- ಅಂಗನವಾಡಿ ಕೇಂದ್ರದಲ್ಲಿ 3 ರಿಂದ 6 ವರ್ಷದ ಮಕ್ಕಳಿಗಾಗಿ ಪ್ರತಿದಿನ ರೂ.8 ರ ಮೌಲ್ಯದ ಪೂರಕ ಪೌಷ್ಟಿಕ ಆಹಾರ ತಯಾರಿಸಿ ಮಕ್ಕಳಿಗೆ ನೀಡಲಾಗುತ್ತಿದೆ. ಇವುಗಳ ಅನುಷ್ಠಾನ ಸರಿಯಾಗಿ ಆಗುತ್ತಿದೆಯೇ ಎಂದು ನೋಡುವುದು ಮತ್ತು ಗ್ರಾಮದ ಎಲ್ಲಾ ಮಕ್ಕಳಿಗೆ ಈ ಸೌಲಭ್ಯವನ್ನು ಪಡೆದುಕೊಳ್ಳುವುದನ್ನು ಖಾತರಿಪಡಿಸಿಕೊಳ್ಳುವುದು.

- ಅಂಗನವಾಡಿ ಕೇಂದ್ರದ ಮಕ್ಕಳಿಗೆ ವಾರದಲ್ಲಿ ಎರಡುದಿನ ಮೊಟ್ಟೆಯನ್ನು ನೀಡಲಾಗುತ್ತಿದ್ದು ಇದು ಗ್ರಾಮದ ಎಲ್ಲಾ ಮಕ್ಕಳಿಗೆ ನಿರಂತರವಾಗಿ ಸಿಗುತ್ತಿದ್ದೆಯೇ ಎಂದು ಮೇಲುಸ್ತುವಾರಿ ಮಾಡುವುದು.

- ಗ್ರಾಮದಲ್ಲಿರುವ ತೀವ್ರ ಅಪೌಷ್ಟಿಕ ಮಕ್ಕಳಿಗೆ ಪ್ರತಿ ದಿನ ರೂ 12 ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ. ತಮ್ಮ ಗ್ರಾಮದಲ್ಲಿರುವ ತೀವ್ರ ಅಪೌಷ್ಟಿಕ ಮಕ್ಕಳಿಗೆ ಈ ಸೌಲಭ್ಯವು ಸಿಗುವಂತೆ ನೋಡಿಕೊಳ್ಳುವುದು.

- ತೀವ್ರ ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿಯಲ್ಲಿ ಔಷಧಿ, ಚಿಕಿತ್ಸೆ ಮತ್ತು ಆಹಾರಕ್ಕಾಗಿ ಪ್ರತಿ ಮಗುವಿಗೆ ರೂ 2000/–ಗಳ ವೆಚ್ಚವನ್ನು ಇಲಾಖೆ ಭರಿಸುತ್ತದೆ. ಇದು ಗ್ರಾಮದಲ್ಲಿರುವ ಎಲ್ಲಾ ಮಕ್ಕಳಿಗೆ ಸಿಗುತ್ತಿದ್ದೆಯೇ ಎಂದು ಖಾತ್ರಿ ಪಡಿಸಿಕೊಂಡು, ಅವಶ್ಯಕ ಮಕ್ಕಳಿಗೆ ಈ ಯೋಜನೆಯ ಲಾಭ ಸಿಗುವಂತೆ ಮಾಡುವುದು.

- ತೀವ್ರ ಅಪೌಷ್ಟಿಕ ಮಕ್ಕಳಿಗೆ ಹಾಗೂ ಹಿಂದುಳಿದ 5 ಜಿಲ್ಲೆಗಳಾದ ಬೀದರ್, ಕಲಬುರ್ಗಿ, ಯಾದಗಿರಿ, ಕೊಪ್ಪಳಹಾಗೂ ರಾಯಚೂರಿನ ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ 200 ಎಂ.ಎಲ್ ಕೆನೆಭರಿತ

ಹಾಲನ್ನು, ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಕೆನೆಭರಿತ ಹಾಲನ್ನು ನೀಡುವ ಯೋಜನೆ ಇದ್ದು, ಈ ಸೌಲಭ್ಯವು ಅವಶ್ಯವಿರುವ ಎಲ್ಲಾ ಮಕ್ಕಳಿಗೆ ಸಿಗುವಂತೆ ನೋಡಿಕೊಳ್ಳುವುದು.

- ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ 6 ತಿಂಗಳಿಂದ 6 ವರ್ಷದ ಎಲ್ಲಾ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲಿ. ಹಾಲು ನೀಡಲಾಗುತ್ತಿದ್ದು (15 ಗ್ರಾಂ. ಕೆನೆಭರಿತ ಹಾಲಿನ ಪುಡಿ, 10 ಗ್ರಾಂ ಸಕ್ಕರೆ) ಯನ್ನು ನೀಡಲಾಗುತ್ತಿದ್ದು ತಮ್ಮ ಗ್ರಾಮದ ಎಲ್ಲಾ ಮಕ್ಕಳಿಗೆ ಈ ಯೋಜನೆಯ ಸೌಲಭ್ಯ ಸಿಗುತ್ತಿದ್ದೆಯೇ ಎಂಬುದನ್ನು ಖಾತರಿ ಪಡೆದುಕೊಳ್ಳುವುದು.
- ಆರೋಗ್ಯ ಇಲಾಖೆಯ ಪೌಷ್ಟಿಕ ಪುನರ್ವಸತಿ ಕೇಂದ್ರ (ಎನ್.ಆರ್.ಸಿ) ಹಾಗೂ ಮಾರ್ಪಡಿತ ಪೌಷ್ಟಿಕ ಪುನರ್ವಸತಿ ಕೇಂದ್ರ (ಎಂ.ಎನ್.ಆರ್.ಸಿ) ಗಳಲ್ಲಿ ಅಪೌಷ್ಟಿಕ ಮಕ್ಕಳಿಗೆ ಚಿಕಿತ್ಸಾ ಸೌಲಭ್ಯಗಳು ಇರುತ್ತವೆ. ಇಂಥಹ ಮಕ್ಕಳಿಗೆ ಈ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವಂತೆ ಜಾಗೃತಿಯನ್ನು ಮೂಡಿಸುವುದು.
- ಗ್ರಾಮದಲ್ಲಿರುವ ತಾಯಂದಿರಿಗೆ ನಿಯಮಿತವಾಗಿ ಪೌಷ್ಟಿಕ ಆಹಾರದ ಬಗ್ಗೆ ಪ್ರಾತ್ಯಕ್ಷತೆ ಮೂಲಕ ತಿಳುವಳಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಗ್ರಾಮದಲ್ಲಿ 11 ರಿಂದ 14 ವರ್ಷದ ಶಾಲೆಯಿಂದ ಹೊರಗುಳಿದ ಕಿಶೋರಿಯರಿಗಾಗಿ ಪೂರಕ ಪೌಷ್ಟಿಕ ಆಹಾರ ಪಡಿತರವನ್ನು ಮನೆಗೆ ನೀಡುವ ಯೋಜನೆ ಇದ್ದು ಈ ಯೋಜನೆಯ ಅನುಷ್ಠಾನವು ಹೇಗೆ ನಡೆಯುತ್ತಿದ್ದೆ ಎಂದು ತಿಳಿದು ಅಂಥಹ ಕಿಶೋರಿಯರಿಗೆ ಈ ಸೌಲಭ್ಯವನ್ನು ಪಡೆದು ಕೊಳ್ಳಲು ಅರಿವನ್ನು ಮೂಡಿಸುವುದು.
- ಪ್ರಧಾನಮಂತ್ರಿ ಮಾತೃವಂದನ ತಾಯಿ ಮತ್ತು ಮಗುವಿನ ಮರಣವನ್ನು ನಿಯಂತ್ರಿಸಲು ಪೌಷ್ಟಿಕ ಆಹಾರವನ್ನು ಪಡೆಯಲು ಕೇಂದ್ರ ಸರ್ಕಾರವು 3 ಕಂತುಗಳಲ್ಲಿ ರೂಪಾಯಿ 5000 ಗಳನ್ನು ನೀಡುತ್ತದೆ (1000+2000+2000).

**ಮಧ್ಯಾಹ್ನದ ಬಿಸಿಯೂಟ ಯೋಜನೆ**

- ಮಧ್ಯಾಹ್ನದ ಬಿಸಿಯೂಟ ಯೋಜನೆ (ಅಕ್ಷರ ದಾಸೋಹ) ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡಲಾಗುತ್ತಿದ್ದು ಅವುಗಳ ಸರಿಯಾದ ಪೂರೈಕೆ ಮತ್ತು ಯೋಜನೆಯ ಅನುಷ್ಠಾನವನ್ನು ಆಗ್ಗಿಂದಾಗೆ ನೋಡಿಕೊಳ್ಳುವುದು.
- ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ 18 ಗ್ರಾಂ ಕೆನೆಭರಿತ ಹಾಲಿನಪುಡಿಯಿಂದ ತಯಾರಿಸಿದ 150 ಮಿಲಿ ಹಾಲನ್ನು ವಾರದಲ್ಲಿ 5 ದಿನ ನೀಡಲಾಗುತ್ತಿದ್ದು ಅವುಗಳ ಸರಿಯಾದ ಪೂರೈಕೆ ಮತ್ತು ಯೋಜನೆಯ ಅನುಷ್ಠಾನವನ್ನು ಆಗ್ಗಿಂದಾಗೆ ನೋಡಿಕೊಳ್ಳುವುದು.